ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ/Fax: 0831-2429662
e-mail: ceozpbelgaum@yahoo.com, dsdevbgm@gmail.com

ವಿಷಯ: ಸನ್ 2014-15ನೇ ಸಾಲಿನಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ 3 ತಂಡಗಳಲ್ಲಿ 6 ದಿನಗಳ ಪುನ:ಶ್ಚೇತನ ತರಬೇತಿ ಆಯೋಜಿಸುವ ಕುರಿತಂತೆ ತರಬೇತಿ ಕೇಂದ್ರಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾದ:1) ನಿರ್ದೇಶಕರು, ಅಬ್ದುಲ್ ನಜೀರಸಾಬ, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸುತ್ತೋಲೆ ಸಂ:PLN/SIRD/PDO-Ref-Course-Trg-01/2013-14, ದಿನಾಂಕ:13-6-2014.

2) ಈ ಕಾರ್ಯಾಲಯದ ಆದೇಶ ಸಂ:ಜಿಪ/ಅಭಿವೃದ್ಧಿ/ಪಂಅಅ/ವಿವ-27/2014-15, ದಿನಾಂಕ:20-6-2014.

3) ನಿರ್ದೇಶಕರು, ಅಬ್ದುಲ್ ನಜೀರಸಾಬ, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರು ದಿನಾಂಕ:1-7-2014 ರಂದು ಬಿಡುಗಡೆ ಮಾಡಿದಂತೆ.

**ಪ್ರಸ್ತಾವನೆ:**

ಸನ್ 2014-15ನೇ ಸಾಲಿನಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ 3 ತಂಡಗಳಲ್ಲಿ 6 ದಿನಗಳ ಪುನ:ಶ್ಚೇತನ ತರಬೇತಿಯನ್ನು ದಿನಾಂಕ:16-6-2014 ರಿಂದ 5-7-2014 ರವರೆಗೆ ಪುನ:ಶ್ಚೇತನ ತರಬೇತಿಯನ್ನು ಜರುಗಿಸಲಾಗಿರುತ್ತದೆ. ಸದರಿ ತರಬೇತಿಗೆ ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಈ ಮೂರು ಜಿಲ್ಲೆಯಿಂದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಆಗಮಿಸುತ್ತಿದ್ದು, ಮೂರು ತಂಡದವರು ಬೇರೆ ಬೇರೆ ದಿನಾಂಕಗಳಂದು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಾರೆ. 1ನೇ ತಂಡ 42, 2ನೇ ತಂಡ 44, 3ನೇ ತಂಡ 46 ಒಟ್ಟು 132 ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಜಿಲ್ಲಾ ತರಬೇತಿ ಸಂಸ್ಥೆ, ಸಂಗಮೇಶ್ವರ ನಗರ, ಬೆಳಗಾವಿ ಇವರಲ್ಲಿ ತರಬೇತಿಯನ್ನು ಜರುಗಿಸಲಾಗುತ್ತಿದೆ.

ಓದಲಾದ ಕ್ರಸಂ:(2)ರ ಆದೇಶದಲ್ಲಿ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಸಂಗಮೇಶ್ವರ ನಗರ ಬೆಳಗಾವಿ ಇವರಿಗೆ ಓದಲಾದ ಕ್ರಸಂ:(1)ರ ಆದೇಶದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ 3 ವಾರಗಳ ಪುನ:ಶ್ಚೇತನ ತರಬೇತಿಗೆ ತಗಲುವಷ್ಟು ಬಿಡುಗಡೆಯಾದ ಮೊತ್ತದಲ್ಲಿ ಶೇ 50 ರಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಓದಲಾದ ಕ್ರಸಂ:(3) ರಲ್ಲಿ ನಿರ್ದೇಶಕರು, ಅಬ್ದುಲ್ ನಜೀರಸಾಬ್, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರು ಪ್ರಾಚಾರ್ಯರು ಜಿಲ್ಲಾ ತರಬೇತಿ ಸಂಸ್ಥೆ, ಬೆಳಗಾವಿ ಇವರಿಗೆ 2ನೇ ಕಂತಿನಲ್ಲಿ ರೂ.1,07,203/- ಗಳನ್ನು ಬಿಡುಗಡೆ ಮಾಡಲು ಸೂಚನೆ ನೀಡಿದ ಪ್ರಕಾರ ಸದರಿ ಮೊತ್ತವನ್ನು ಈ ಕೆಳಗೆ ತೋರಿಸಿದಂತೆ ಬಿಡುಗಡೆ ಮಾಡಲು ಅವಶ್ಯವಿರುತ್ತದೆ.

| ಅನಂ | ಸಂಸ್ಥೆಯ ಹೆಸರು | SIRD ಸಂಸ್ಥೆಯವರು ನಿಗದಿಪಡಿಸಿದ ಆಯವ್ಯಯ | ಈಗಾಗಲೇ ಶೇ 50 ರಷ್ಟು ಸಂಸ್ಥೆಯವರಿಗೆ ಬಿಡುಗಡೆ ಮಾಡಿದ ಮೊತ್ತ | SIRD ಸಂಸ್ಥೆಯವರು 2ನೇ ಕಂತಿನಲ್ಲಿ ಬಿಡುಗಡೆ ಮಾಡಿದ ಮೊತ್ತ | 2ನೇ ಕಂತಿನಲ್ಲಿ ಸಂಸ್ಥೆಯವರಿಗೆ ಬಿಡುಗಡೆ ಮಾಡಬೇಕಾದ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ ಸಂಗಮೇಶ್ವರ ನಗರ ಬೆಳಗಾವಿ | 3,29,450/- | 1,64,725/- | 1,07,203 | 1,07,203/- |

ಕಾಲಂ ನಂ:(6)ರಲ್ಲಿ ಕಾಣಿಸಿದಂತೆ 2ನೇ ಕಂತಿನ ಮೊತ್ತವನ್ನು ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಸಂಗಮೇಶ್ವರ ನಗರ, ಬೆಳಗಾವಿ ಇವರಿಗೆ ಬಿಡುಗಡೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಆದೇಶಿಸಲು ಈ ಕೆಳಕಂಡ ಆದೇಶ.

ಕ್ರಸಂ:ಜಿಪ/ಅಭಿವೃದ್ಧಿ/ಪಂಅಅ/ವಿವ-27/2014-15

ಬೆಳಗಾವಿ,ದಿನಾಂಕ:7-7-2014

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಬ್ದುಲ್ ನಜೀರಸಾಬ್, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರು ಬಿಡುಗಡೆ ಮಾಡಿದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ 3 ವಾರಗಳ ಪುನ:ಶ್ಚೇತನ ತರಬೇತಿಗಾಗಿ ಶೇ 50 ರಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ. ನಿರ್ದೇಶಕರು, ಅಬ್ದುಲ್ ನಜೀರಸಾಬ್, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರು 2ನೇ ಕಂತಿನ ಬಿಡುಗಡೆ ಮಾಡಿದ ಮೊತ್ತವನ್ನು ಈ ಕೆಳಗೆ ಕಾಣಿಸಿದಂತೆ ಬಿಡುಗಡೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಆದೇಶಿಸಿದೆ.

| ಅನಂ | ಸಂಸ್ಥೆಯ ಹೆಸರು | SIRD ಸಂಸ್ಥೆಯವರು ನಿಗದಿಪಡಿಸಿದ ಆಯವ್ಯಯ | ಈಗಾಗಲೇ ಶೇ 50 ರಷ್ಟು ಸಂಸ್ಥೆಯವರಿಗೆ ಬಿಡುಗಡೆ ಮಾಡಿದ ಮೊತ್ತ | SIRD ಸಂಸ್ಥೆಯವರು 2ನೇ ಕಂತಿನಲ್ಲಿ ಬಿಡುಗಡೆ ಮಾಡಿದ ಮೊತ್ತ | 2ನೇ ಕಂತಿನಲ್ಲಿ ಸಂಸ್ಥೆಯವರಿಗೆ ಬಿಡುಗಡೆ ಮಾಡಬೇಕಾದ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ ಸಂಗಮೇಶ್ವರ ನಗರ ಬೆಳಗಾವಿ | 3,29,450/- | 1,64,725/- | 1,07,203 | 1,07,203/- |

ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಸಂಗಮೇಶ್ವರ ನಗರ, ಬೆಳಗಾವಿ ಇವರು 1ನೇ ಕಂತಿನಲ್ಲಿ ಬಿಡುಗಡೆ ಮಾಡಿದ ಮೊತ್ತಕ್ಕೆ ಖರ್ಚು ಭರಿಸಿದ ನಂತರ ಉಪಯೋಗತಾ ಪ್ರಮಾಣ ಪತ್ರ ಸಲ್ಲಿಸಿದ ನಂತರ 2ನೇ ಕಂತಿನ ಉಳಿದ ಮೊತ್ತವನ್ನು ಬಿಡುಗಡೆಗೊಳಿಸುವ ಶರತ್ತಿನೊಂದಿಗೆ ಮೇಲ್ಕಂಡ ಮೊತ್ತವನ್ನು ಬಿಡುಗಡೆಗೊಳಿಸಲು ಆದೇಶಿಸಿದೆ.

[ದೀಪ ಚೋಳನ್]
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು: ನಿರ್ದೇಶಕರು, ಅಬ್ದುಲ್ ನಜೀರಸಾಬ, ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-570011 ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು: ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು: ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ ಸಂಗಮೇಶ್ವರ ನಗರ, ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ